ಕಾಲಾಂತರದಲ್ಲಿ ಈ ಮಾಯಾವಿ 'ಮಳೆಯಲಿ ಜೊತೆಯಲಿ...' ಎನ್ನುವಂತಾಗಿ ಫೇಸ್‌ಬುಕ್ಕು ನೂರಾರು ಟಿಸಿಲೊಡೆದು, ವಾಟ್ಸ್‌ಆ್ಯಪು, ಟೆಲೆಗ್ರಾಮು, ಸ್ನಾಪ್ ಚಾಟು, ಹೈಕು, ಟ್ವಿಟ್ಟರ್ರು ಎಲ್ಲವೂ ಎಲ್ಲಾ ಕಾಲಕ್ಕೂ ಬೇಕು ಎನ್ನುವಂತೆ ಆಗಿ ಅಂತರ್ಜಾಲವಿಲ್ಲದೆ ನಾವಿಲ್ಲ ಎನ್ನುವಷ್ಟರ ಮಟ್ಟಕ್ಕೆ ಬಂದು ನಿಂತಿದ್ದೇವೆ.

ನಿಸ್ತಂತು ಜಗತ್ತಿನ ಸಾಮಾಜಿಕ ಜಾಲತಾಣವೆಂಬ ಚಟುವಟಿಕೆಯ ಜಗತ್ತಿಗೆ ದಶಕಕ್ಕೂ ಮೀರಿ ಸಮಯ ಸಂದಿದೆ. ಅಲ್ಲಿ ಕಳೆದಿರುವಷ್ಟು ಸಮಯ ಮತ್ತು ಓದಿರುವಷ್ಟು ಲೇಖನಗಳು, ಆಡಿರುವಷ್ಟು ಮಾತುಗಳು, ಜಗಳಗಳು, ಸಿಟ್ಟು–ಸೆಡವುಗಳು, ಮರೆವು, ಮೋಸಗಳು, ಪ್ರೇಮ ಕತೆ, ಭಗ್ನಗೊಂಡ ಕನಸುಗಳು, ಸಿಕ್ಕ ಕೆಲಸಗಳು, ಹಂಚಿಕೊಂಡ ಆಲೋಚನೆಗಳು, ಆಡಿದ ಮಾತುಗಳು, ಆಡಬಾರದಿದ್ದ ನುಡಿಗಳು, ಘಟಿಸಿದ ಮೋಸಗಳು ಎಲ್ಲವೂ ಇಂದು ಕಣ್ಣಿಗೆ ಕಟ್ಟಿದಂತಿವೆ. ಹಾಗೆ ನೋಡಿದರೆ ಸಾಮಾಜಿಕ ಜಾಲತಾಣದ ಸಾಧ್ಯತೆಗಳ ಕಟ್ಟಕಡೆಯ ಘಟ್ಟದಲ್ಲಿ ನಾವು ನಿಂತಿಲ್ಲ. ಇದರ ಸಂಪೂರ್ಣ ಸಾಧ್ಯತೆಗಳ ಅನಾವರಣದಲ್ಲಿ ಮಧ್ಯದಲ್ಲೆಲ್ಲೋ ತಾಕಲಾಡುತ್ತಾ ನಿಂತಿದ್ದೇವೆ.

ಈ ಸಾಮಾಜಿಕ ಜಾಲತಾಣಗಳ ಭರಾಟೆ ಸಂಪೂರ್ಣವಾಗಿ ಬಳಕೆಯಾದದ್ದು ರಾಜಕೀಯ ಪಲ್ಲಟದ ಸಮಯದಲ್ಲಿ. ಅಯ್ಯೋ! ಆ ದಿನಗಳಲ್ಲಿ ಫೇಸ್‌ಬುಕ್ಕೆಂಬುದು ಅಕ್ಷರಶಃ ಯುದ್ಧ ಭೂಮಿಯಾಗಿ ಪರಿಣಮಿಸಿ ಒಬ್ಬರ ಮೇಲೊಬ್ಬರು ಕತ್ತಿ ಮಸೆಯುತ್ತಲೇ ಜನಗಳು ಮಾತನಾಡುತ್ತಿದ್ದರು. ಅವರ ಸಿದ್ಧಾಂತ ನಿಮಗೆ ಇಷ್ಟವಿಲ್ಲದಿದ್ದರೆ ಅವರನ್ನು ಬದ್ಧ ವೈರಿ ಎಂಬಂತೆ ನೋಡುವುದು, ಅಥವಾ ಬುದ್ಧಿಮಟ್ಟದಲ್ಲಿ ತನಗಿಂತ ಕೀಳು ಎಂಬಂತೆ ಬಿಂಬಿಸುವುದು ಎಲ್ಲವೂ ನಡೆಯುತ್ತಿತ್ತು. ಆಗೆಲ್ಲಾ ಯಾರು ಫೋನು ಮಾಡಿದರೂ ಮಾತು ಶುರುವಾಗುತ್ತಿದ್ದುದು "ನೋಡಿದ್ಯಾ? ಏನು ಬರೆದಿದ್ದಾರೆ ಅವರು? ಅವರು ಹಿಂಗೇ ಅಂತ ನನಗೆ ಮೊದಲೇ ಗೊತ್ತಿತ್ತು... ಈಗ ಬಯಲಿಗೆ ಬಂತು" ಎಂಬ ಸತ್ಯ ದರ್ಶನದ ಚರ್ಚೆ. ಮೊದಲು ಹಾಕಲು ಒಂದು ಫೋಟೊ ಸಹ ಸಿಗುತ್ತಿಲ್ಲ ಎನ್ನುವ ಕಾರಣಕ್ಕೆ ಪ್ರೊಫೈಲ್ ಪಿಕ್ಚರ್ ಅನ್ನು ಖಾಲಿ ಬಿಡುತ್ತಿದ್ದವರೂ ನಂತರ ಸೆಲ್ಫಿ ಹುಚ್ಚಿಗೆ ಬಿದ್ದರು. ಮಾಡುತ್ತಿದ್ದ ಚರ್ಚೆಗೆ ಅನುಗುಣವಾಗಿ ಇಮೇಜ್‌ಗೆ ಹೊಂದಿಕೊಳ್ಳುವಂತಹ ಒಂದು ಸೂಪರ್ ಫೋಟೊ ಇಲ್ಲದಿದ್ದರೆ ಹೇಗೆ!

ಹೀಗೆ ಶುರುವಾಗಿ ಸ್ವಲ್ಪ ಸ್ವಲ್ಪವೇ ಭವದ ಸಂಕೇತಗಳು ಹೆಗಲೇರುತ್ತ ಹೋಗಿ ಸಂಪೂರ್ಣ ಸಾಮಾಜಿಕ ಜಾಲತಾಣ ವ್ಯಸನಿಗಳಾಗಿಬಿಟ್ಟೆವು. ಅದರಲ್ಲೇ ಹಾಡು–ಹಸೆ, ಮುನಿಸು, ಸರಸ, ವಿರಸ, ಮಾತು–ಕತೆ, ನೆನಪು–ಒನಪು, ಕಾಲಾತೀತ ನೆನಪುಗಳ ಆಗರ, ಕಳೆದುಹೋದ ಸಂಬಂಧಗಳನ್ನೂ ಹುಡುಕಿ ಒಟ್ಟುಗೂಡಿಸಿದ ಈ ವಿಸ್ಮಯಕಾರೀ ಘಟಿತ ನಮ್ಮ ದೇಶದಲ್ಲೂ ಸೇರಿದಂತೆ ಎಷ್ಟೋ ದೇಶಗಳಲ್ಲಿ ರಾಜಕೀಯ ಪಲ್ಲಟಗಳಿಗೆ ದಾರಿ ಮಾಡಿಕೊಟ್ಟು ಪ್ರಜಾಪ್ರಭುತ್ವಕ್ಕೆ ಧಕ್ಕೆಯುಂಟು ಮಾಡುವಷ್ಟು ಶಕ್ತವಾದ ಒಂದು ಆಯುಧವಾಗಿ ಬದಲಾಯಿತು.

ಈ ಬೈನರಿಗಳ ಜಗತ್ತಿನಲ್ಲಿ ಅಲ್ಲಲ್ಲಿ ಚುಮುಕಿಸಿದಷ್ಟು ಸಹ್ಯ ನೆನಪುಗಳು. ಇನ್ನೆಲ್ಲಾ ರಾಜಕೀಯ ಚರ್ಚೆ. ನಮ್ಮ ನಾಯಕರೇ ಮಹಾನ್ ಎನ್ನುವಾಗಲೇ ನಿಮ್ಮ ನಾಯಕರು ನಾಲಾಯಕ್ಕು ಎನ್ನುವ ಕುಹಕ ಎಷ್ಟೋ ಸಂಬಂಧಗಳನ್ನು ಕೆಡಿಸಿದ ಹೊತ್ತಿನಲ್ಲೇ ಆ ಇಬ್ಬರೂ ಸದರಿ ನಾಯಕರೂ ಇವರಿಬ್ಬರನ್ನು ಹೀಗೆ ಜಾಲತಾಣವೆಂಬ ಚಕ್ರವ್ಯೂಹದಲ್ಲಿ ಬಡಿದಾಡಲು ಬಿಟ್ಟು ಇನ್‌ಬಾಕ್ಸಿನಲ್ಲಿ ತಮ್ಮ ಹಿತ ಕಾಯ್ದುಕೊಂಡು ಬೆಚ್ಚಗೆ ಕುಳಿತಿದ್ದರು ಎನ್ನುವ ಸತ್ಯ ಕೂಡ ಅರ್ಥವಾಗಲು ಸಮಯ ಹಿಡಿಯಿತು.

ಎಂಥೆಂಥ ಸಂವೇದನಾಶೀಲರು ಎಂದುಕೊಂಡ ಜನರೆಲ್ಲಾ ಯಾವುದೋ ಒಂದು ಸಂದರ್ಭದಲ್ಲಿ ಇಲ್ಲಿ ಕುಮಟಿ ಬಿದ್ದಿದ್ದಾರೆ. ದಿನ ಬೆಳಗಾದರೆ ಹೊಸ ಹೊಸ ಬರಹ ಸೃಷ್ಟಿ ಮಾಡಬೇಕಾದ ಒತ್ತಡವನ್ನು